ಅ) ಸದಸ್ಯರೇತರಿಗೆ ನಿವೇಶನಗಳನ್ನು ಹಂಚಲಾಗಿದೆಯೇ?

ಇ) ಹಾಗಿದ್ದಲ್ಲಿ ಸದಸ್ಯರೇತರರಿಗೆ ನಿವೇಶನ ಹಂಚಲು ಸಂಘವು ಅನುಸರಿಸಿರುವ ಮಾನ ಕಂಡವೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) 2089 ನಿವೇಶನಗಳನ್ನು ಸದಸ್ಯರಿಗೆ ಹಂಚಲಾಗಿದೆ. ನಿವೇಶನದಾರರ ಪಟ್ಟಿಯನ್ನು ಸಹಕಾರ ಸಂಘಗಳ ನಿಬಂಧಕರಿಂದ ಅಥವಾ ಸಂಬಂಧಿಸಿದ ಸಂಘದಿಂದ ಪಡೆಯಬಹುದಾಗಿದೆ. ನಿವೇಶನ ಹಂಚಿಕೆಯಾದ ಯಾವುದೇ ಸದಸ್ಯರ ಬಗ್ಗೆ ನಿರ್ದಿಷ್ಟ ಮಾಹಿತಿ ಬೇಕಾಗಿದ್ದಲ್ಲಿ ಅದನ್ನು ಒದಗಿಸಲಾಗುವುದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

## ರಾಜ್ಯದಲ್ಲಿ ಉದ್ಯಾನವನಗಳ ನಿರ್ಮಾಣ

775(1299) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಉದ್ಯಾನವನವನ್ನು ನಿರ್ಮಾಣ ಮಾಡಲು ಸರ್ಕಾರ ಮೀಸಲಿಟ್ಟ ಹಣವೆಷ್ಟು?

ಆ) ಎಷ್ಟು ಉದ್ಯಾನವನವನ್ನು ಪುನರ್ ನಿರ್ಮಾಣಕ್ಕೆ ಸರ್ಕಾರ ನಿರ್ಧರಿಸಿದೆ. (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

## ನುಸಿಪೀಡೆ ಔಷಧಿಗಾಗಿ ಖರ್ಚು ಮಾಡಿದ ಮೊತ್ತ

776(942) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನುಸಿಪೀಡೆ ರೋಗದ ಔಷಧಿಗಾಗಿ ಸರ್ಕಾರವು ಈ ತನಕ ಖರ್ಚು ಮಾಡಿದ ಮೊತ್ತ ಎಷ್ಟು?

ಆ) ಪ್ರಕೃತ ಈ ಔಷಧಿಯನ್ನು ಸರ್ಕಾರವು ಸಿಂಪರಣೆ ಕಾರ್ಯದಿಂದ ಹಿಂದಕ್ಕೆ ಪಡೆಯಲು ಕಾರಣವೇನು?

ಇ) ಔಷಧಿಯನ್ನು ಯಾವ ಆಧಾರದಲ್ಲಿ ಪರಿಣಾಮಕಾರಿಯಲ್ಲವೆಂಬುದಾಗಿ ಸರ್ಕಾರವು ನಿರ್ಧರಿಸಿದೆ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ರಾಜ್ಯದ ಪ್ರಮುಖ 12 ಜಿಲ್ಲೆಗಳಲ್ಲಿ 13.20 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಆ) ತೆಂಗಿನ ಮರಗಳಿಗೆ ಪಾರ್ಶ್ವ ಪರಿಣಾಮಗಳಾದ ಅಪರೂಪ ಪ್ರಕರಣಗಳಿಂದಾಗಿ ರೈತರು ಔಷಧೋಪಚಾರ ಕೈಗೊಳ್ಳಲು ಮುಂದೆ ಬರುತ್ತಿಲ್ಲ.

ಇ) ಉದ್ಭವಿಸುವುದಿಲ್ಲ.

**ಅಡಿಕೆ ಉತ್ಪನ್ನಗಳ ಉತ್ಪಾದನೆಗೆ ಕೈಗಾರಿಕೆಗಳನ್ನು ಪ್ರಾರಂಭಿಸುವುದು**

777(996) ಶ್ರೀ ಡಿ.ವಿ. ಸದಾನಂದಗೌಡ(ಪುತ್ತೂರು) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಡಿಕೆಯ ಉಪಯೋಗವನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆಯೇ?

ಆ) ಖಾಸಗಿಯವರು ಅಡಿಕೆಯ ಉಪ ಉತ್ಪನ್ನಗಳ ಉತ್ಪಾದನೆಗೆ ಕೈಗಾರಿಕೆಗಳನ್ನು ಪ್ರಾರಂಭಿಸುವ ಉದ್ದೇಶವಿದ್ದಲ್ಲಿ ಸರ್ಕಾರದ ವತಿಯಿಂದ ಏನು ಉತ್ತೇಜನ ನೀಡಲಾಗುವುದು?

ಇ) ರಾಜ್ಯದಲ್ಲಿ ಒಟ್ಟು ಎಷ್ಟು ಪಾನ್ ಬೀಡಾ ಸ್ಟಾಲ್‌ಗಳಿವೆ ಮತ್ತು ಈ ಸ್ಟಾಲ್‌ಗಳಲ್ಲಿ ಸರಾಸರಿ ಉಪಯೋಗವಾಗುವ ಅಡಿಕೆ ಪ್ರಮಾಣ ಎಷ್ಟು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಇಲ್ಲ.

ಆ) ರಾಜ್ಯದ ಕೈಗಾರಿಕಾ ನೀತಿ 2001-06ರಂತೆ ಹೊಸದಾಗಿ ಪ್ರಾರಂಭಿಸಿರುವ ಕೈಗಾರಿಕೆಗಳಿಗೆ ನೀಡಲಾಗುವ ರಿಯಾಯಿತಿ ಸವಲತ್ತುಗಳನ್ನು ಇಂತಹ ಕೈಗಾರಿಕೆಗಳಿಗೂ ಲಭ್ಯವಿರುವಂತೆ ನೀಡಲಾಗುವುದು.

ಇ) ಈ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

**ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆಯುವ ಬೆಳೆಗಳು**

778(997) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೀರಾವರಿ ಸಂಬಂಧ ನಿರ್ಮಿಸಿರುವ ಆಣೆಕಟ್ಟೆಯ ಫಲಾನುಭವಿಗಳು, ರೈತರು ನಿರ್ದಿಷ್ಟವಾಗಿ ಬೆಳೆಯಬೇಕಾದ ಬೆಳೆಗಳನ್ನು ನಿಗದಿಪಡಿಸಿದ್ದಲ್ಲಿ ಈ ಬಗ್ಗೆ ಸರ್ಕಾರವು ರೈತರಿಂದ ನಿರ್ದಿಷ್ಟ ಬೆಳೆಯನ್ನು ಬೆಳೆಯುವಂತೆ ಮುಚ್ಚಳಿಕೆ ಪತ್ರ ಅಥವಾ ಕರಾರನ್ನು ಪಡೆದುಕೊಂಡಿದೆಯೇ?

ಆ) ಹೀಗಿದ್ದಲ್ಲಿ ಯಾವ ಯಾವ ಆಣೆಕಟ್ಟೆಗೆ ಸಂಬಂಧಿಸಿದ ಫಲಾನುಭವಿಗಳು ಸಂಬಂಧಪಟ್ಟ ಅಚ್ಚುಕಟ್ಟು ಪ್ರದೇಶದಲ್ಲಿ ಯಾವ ಯಾವ ಬೆಳೆಯನ್ನು ಬೆಳೆಯಲಾಗುತ್ತದೆ ಎಂಬ ವಿವರ ಒದಗಿಸುವುದು.